# 02-12-2023

# KALASAMBRAHAMA





















ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ 2023ರ **'ಕಲಾಸಂಭ್ರಮ'** ವನ್ನು ಹಮ್ಮಿಕೊಂಡಿದ್ದು, ಅಂಕಣಕಾರ ಖ್ಯಾತಕವಿ ಡಾ.ಜಯಪ್ಪ ಹೊನ್ನಾಳ್ಳಿ ಅವರು ಜ್ಯೋತಿಯನ್ನು ಬೆಳಗಿಸುವುದರ ಮುಖೇನ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಲೆ ಬದುಕಿನ ಭಾವಲಹರಿಯಾಗಿದ್ದು, ವಿದ್ಯಾರ್ಥಿಗಳನ್ನು ಚಿಂತಕರನ್ನಾಗಿ, ಸಾಂಸ್ಕೃತಿಕ ವ್ಯಕ್ತಿಗಳನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕಲೆ ಇರೋದು ವಿನೋದಕ್ಕಾಗಿ ಅಲ್ಲ ವಿಕಾಸಕ್ಕಾಗಿದ್ದು, ನರಳಿಸುವ ಮನಸ್ಸುಗಳನ್ನು ಅರಳಿಸುವ ಶಕ್ತಿ ಕಲೆಗೆ ಇದೆ ಎಂದು ಅಭಿಪ್ರಾಯ ಪಟ್ಟರು. ಮನುಷ್ಯನನ್ನು ಸೃಜನಶೀಲ ವ್ಯಕ್ತಿಯಾಗಿಸುವಲ್ಲಿ 'ಕಲೆ' ಪ್ರಧಾನವಾಗಿದೆ. ಒಂದು ದೇಶದ ಶ್ರೀಮಂತಿಕೆ ಕೂಡಿರುವುದು ಆ ದೇಶದ ಕಲೆ ಮತ್ತು ಸಂಸ್ಕೃತಿಯ ಭಾವಸಂಪತ್ತಿನಿಂದ. ಅಲ್ಪಮಾನವನ್ನು ಕಲ್ಪಮಾನವನಾಗಿ ಮಾಡುವ ಮನಸ್ಸು ಮನಸ್ಸುಗಳನ್ನು ಸಂಸ್ಕರಿಸುವ ಶಕ್ತಿ ಕಲೆಗೆ ಇದೆ ಎಂದು ಪುರಾಣದ ಶ್ರೀ ಕೃಷ್ಣನ ಮುರಳಿಗಾನ ಅಮೃತ ಪಾನವನ್ನು ಮೊದಲುಗೊಂಡು, ಐತಿಹಾಸಿಕ ವ್ಯಕ್ತಿಗಳಾದ ಅಕ್ಬರ್, ತಾನಸಿಂಗ್, ಹಾಗೂ ಗುರು–ಹರಿದಾಸರು ಸೇರಿದಂತೆ ಶಹನಾಹಿ ವಾದಕ ಬಿಸ್ಮಿಲ್ಲಾಖಾನ್‌ರ ನಿದರ್ಶನಗಳನ್ನು ಸಾಂದರ್ಭಿಕವಾಗಿ ಹೆಸರಿಸಿದರು. ಕಲಾವಿದನಿಗೆ ಸತ್ಯವನ್ನು ಬೆಳಕಿಗೆ ತರುವ ಛಾತಿಯಿದ್ದು, ಸಾಧನೆಗೆ ವೇದನೆ ಬೇಕು ವೇದನೆ ಇಲ್ಲದೆ ಸಾಧನೆ ಸಾಧ್ಯವಿಲ್ಲವೆಂದರು. ಸಮತೆ ಮತ್ತು ಮಮತೆ ಕಲೆಯ ಜೀವಾಳವಾಗಿದೆ ಕಲೆ ಜೀವನ್ಮುಖಿಯಾಗಿದ್ದು, ಕಲೆಯಿಂದ ಜೀವನ ವಿಕಸನ ಗೊಳ್ಳುತ್ತದೆಂದು ಹೇಳಿದರು.

ಕಲಾಸಂಭ್ರಮದ ಆಶ್ರಯನುಡಿಗಳನ್ನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್ ಮರೀಗೌಡರು ಹಣಮೇಲು ಸಂಸ್ಕೃತಿ ಇಂದಿನ ಸಮಾಜವನ್ನು ವ್ಯಾಪಕವಾಗಿ ಆವರಿಸುತ್ತಿದ್ದು. ಜಗತ್ತಿನಲ್ಲಿ ಖ್ಯಾತರಾದವರು ಹೇಗೆ ಹಣದ ಹಿಂದೆ ಬಿದ್ದು ಸತ್ತರೆಂಬ ನಿದರ್ಶನಗಳ ತಿಳಿಸಿ, ಸಂಸ್ಕಾರ ಮನಸ್ಸಿನಿಂದ ಜೀವನ ಕಲೆಯನ್ನು ಮೈಗೂಡಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ.ಗುಂಡಪ್ಪಗೌಡರು ವಹಿಸಿದ್ದರು. ವೇದಿಕೆಯಲ್ಲಿ ಕೋಶಾಧ್ಯಾಕ್ಷರಾದ ಶ್ರೀ ಶ್ರೀಶೈಲಾರಾಮಣ್ಣನವರ್ ಉಪಸ್ಥಿತರಿದ್ದರು. ಕಲಾಸಂಭ್ರಮದ ಪ್ರಯುಕ್ತ ರಾಜ್ಯ ಮಟ್ಟದ ಚರ್ಚಾಸ್ಪರ್ಧೆ ಹಾಗೂ ಭಾವಗೀತೆ ಗೀತಗಾಯನ ಸ್ಪರ್ದೆಯನ್ನು ಆಯೋಜಿಸಲಾಗಿತ್ತು. ಪ್ರೊ.ಜೆ.ಮಂಜು ಪ್ರಾರ್ಥಿಸಿದರೆ, ಸಂಚಾಲಕ ಪ್ರೊ.ಅರ್.ಸಿದ್ದರಾಜು ಸ್ವಾಗತಿಸಿದರು. ಪ್ರೊ. ಪ್ರೀತಿ ವಂದಿಸಿದರೆ ಡಾ.ಬಿ.ಟಿ.ರಘು ಕಾರ್ಯಕ್ರಮವನ್ನು ನಿರೂಪಿಸಿದರು.